ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **34 /2024**

| | | | |
|---|---|---|---|
| ಸಾಕ್ಷಿಯ ಹೆಸರು | : ಪುನೀತ್ ಕುಮಾರ್ | ಸಿ.ಡಬ್ಲ್ಯೂ | 5 |
| ತಂದೆಯ ಹೆಸರು | : ಈರಣ್ಣ | ಪಿ.ಡಬ್ಲ್ಯೂ | 10 |
| ವಯಸ್ಸು | : 30 ವರ್ಷ | | |
| ಉದ್ಯೋಗ | : ಪಿ.ಎಸ್.ಐ ಉಡುಪಿ ನಗರ ಠಾಣೆ | | |
| ವಾಸ ಸ್ಥಳ | : ಉಡುಪಿ | | |

ದಿನಾಂಕಃ**05-08-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು ಕಳೆದ ಒಂದು ವರ್ಷದಿಂದ ಉಡುಪಿ ನಗರ ಠಾಣೆಯಲ್ಲಿ ಪಿ.ಎಸ್.ಐ ಎಂದು ಕೆಲಸ ಮಾಡುತ್ತಿದ್ದೇನೆ. ಉಡುಪಿ ನಗರ ಠಾಣೆಯ ಪ್ರಕರಣ ಸಂಖೆ 147/2023 ರಲ್ಲಿ ಆರೋಪಿ ಮತ್ತು ಮಾಲು ಪತ್ತೆಗಾಗಿ ಚಾ.ಸಾ-8 ರವರು ನನ್ನ ನೇತೃತ್ವದಲ್ಲಿ ಸಿಬ್ಬಂಧಿಗಳಾದ ಸತೀಶ್, ಕಿರಣ್, ಆನಂದ, ಹೇಮಂತ ಕುಮಾರ, ಶಿವಕುಮಾರ ಮತ್ತು ಓಬಳೇಶ್ ಅವರನ್ನು ಒಳಗೊಂಡ ಒಂದು ತಂಡವನ್ನು ರಚಿಸಿರುತ್ತಾರೆ. ಅದರಂತೆ ನಾವು ಕುಂಜಿಬೆಟ್ಟು ಏರಿಯಾ ಮತ್ತು ಉಡುಪಿ ನಗರ ವ್ಯಾಪ್ತಿಯಲ್ಲಿ ಸಿ.ಸಿ ಟಿವಿಗಳನ್ನು ಪರಿಶೀಲನೆ ಮಾಡಿದೆವು. ಆಗ ಭಾತ್ಮೀದಾರರು ದಿಃ08-10-2023 ರಂದು ಕಳ್ಳತನವಾದ ಮನೆಯ ಹತ್ತಿರದಲ್ಲಿ ಮಾರುತಿ ಯಕೋ ಕಾರ್ ಅನುಮಾನಾಸ್ಪದವಾಗಿ ನಿಂತಿದ್ದ ಬಗ್ಗೆ ಮಾಹಿತಿ ನೀಡಿರುತ್ತಾರೆ. ಸದರಿ ಕಾರಿನ ಬಗ್ಗೆ ವಿಚಾರಣೆ ನಡೆಸಲಾಗಿ ಅದು ದಿಃ31-10-2023 ರಂದು ನಾನು ಮತ್ತು ನನ್ನ ಸಿಬ್ಬಂಧಿ ಪತ್ತೆ ಕಾರ್ಯದಲ್ಲಿ ಇದ್ದಾಗ ಸಂಜೆ 4-30 ರ ಸುಮಾರಿಗೆ ಬ್ರಹ್ಮಾವರದ ಕಡೆಯಿಂದ ಉಡುಪಿ ಕಡೆಗೆ ಬರುತ್ತಿರುವುದು ಗೊತ್ತಾಯಿತು. ಕೂಡಲೇ ನಾನು ಮತ್ತು ಸಿಬ್ಬಂಧಿ ಉಡುಪಿಯ ಮಲ್ಪೆಪಾದಿ ಜಂಕ್ಷನ್ ಹತ್ತಿರ ಹೋಗಿ ಬ್ರಹ್ಮಾವರದ ಕಡೆಯಿಂದ ಬರುತ್ತಿರುವ ವಾಹನಗಳನ್ನು ವೀಕ್ಷಣೆ ಮಾಡುತ್ತಿದ್ದೆವು. ಸಂಜೆ ಸುಮಾರು 5-15 ಕ್ಕೆ ನಮಗೆ ಬಂದ ಮಾಹಿತಿಯಂತೆ ಮಾರುತಿ ಯಕೋ ಕಾರ್ ಬ್ರಹ್ಮಾವರದ ಕಡೆಯಿಂದ ಬಂತು. ಸದರಿ ಕಾರಿನ ಮುಂಬದಿಯ ಗ್ಲಾಸ್ ಮತ್ತು ಎರಡೂ ಬದಿಯಲ್ಲಿ ತರಚಿದ ಗುರುತುಗಳು ಇದ್ದವು. ಸದರಿಕ ಾರಿನಲ್ಲಿ ಒಬ್ಬ ಆ ಸಾಮಿ ಮಾತ್ರ ಇದ್ದನು. ಅದರ ನಂಬರ್ ಪ್ಲೇಟ್ ನೋಡಲಾಗಿ ಕೆ.ಎ 26 ಎನ್ 4539 ಎಂದು ಬರೆಯಲಾಗಿತ್ತು. ನಂತರ ಆ ಸಾಮಿಯನ್ನು ವಿಚಾರಿಸಲಾಗಿ ಹೆಸರನ್ನು ಮಂಜುನಾಥ ಎಂದು , ತಾನು ಬೆಂಗಳೂರಿನ ನಿವಾಸಿ ಎಂದು ತಿಳಿಸಿದನು. ಕಾರನ್ನು ಪರಿಶೀಲಿಸಲಾಗಿ ಡಿಕ್ಕಿಯಲ್ಲಿ ಎರಡು ನಂಬರ್ ಪ್ಲೇಟುಗಳು ಇದ್ದವು. ಅವುಗಳಲ್ಲಿ ಕೆ.ಎ 51 ಎಂ.ಎಲ್ 0835 ಎಂದು ಬರೆಯಲಾಗಿತ್ತು. ಒಂದು ಬಿಳಿ ಬಣ್ಣದ ಚೀಲದಲ್ಲಿ ಬೆಳ್ಳಿಯಂತೆ ಕಾಣಿಸುವ ವಸ್ತುಗಳು ಕಂಡುಬಂದವು. ಅವುಗಳೊಂದಿಗೆ ಎರಡು ಕಬ್ಬಿಣದ ರಾಡುಗಳು ಕೂಡ ಇದ್ದವು. ಕಾರಿನ ಮುಂಭಾಗದ ಡ್ಯಾಶ್ ಬೋರ್ಡ್ ನಲ್ಲಿ ನೀಲಿ ಬಣ್ಣದ ವಸ್ತ್ರದಲ್ಲಿ ಚಿನ್ನದಂತೆ ಕಾಣಿಸುವ ಆಭರಣಗಳು ಇದ್ದವು. ಆ ಆಭರಣಗಳ ಬಗ್ಗೆ ವಿಚಾರಿಸಿದಾಗ ಆ ಸಾಮಿಯು ಅವುಗಳನ್ನು ಈ ಹಿಂದೆ ದಿಃ08-10-2023

ರಂದು ಉಡುಪಿಯಲ್ಲಿ ಮನೆಕಳ್ಳತನ ಮಾಡಿದಾಗ ಸಿಕ್ಕ ಆಭರಣಗಳು ಎಂದು ತಿಳಿಸಿದನು ಅವುಗಳನ್ನು ಕೇರಳದಲ್ಲಿ ಮಾರಾಟ ಮಾಡಲು ಒಯ್ಯುತಿರುವುದಾಗಿ ತಿಳಿಸಿದನು. ಈಗಾಗಲೇ ಸಾಗರ ಮತ್ತು ಹೊಸನಗರದಲ್ಲಿ ಸ್ವಲ್ಪ ಆಭರಣಗಳನ್ನು ಮಾರಾಟ ಮಾಡಿರುವುದಾಗಿ ತಿಳಿಸಿದನು. ಕಾರಿನ ಬಗ್ಗೆ ವಿಚಾರಿಸಿದಾಗ ಅದನ್ನು ತರೀಕೆರೆಯಿಂದ ಕಳುವು ಮಾಡಿಕೊಂಡು ಬಂದಿರುವುದಾಗಿ ತಿಳಿಸಿದನು. ಕೂಡಲೇ ಅವನನ್ನು ವಶಕ್ಕೆ ಪಡೆದುಕೊಂಡು ಠಾಣೆಗೆ ಬಂದು ನನ್ನ ವರದಿಯೊಂದಿಗೆ ಚಾ.ಸಾ-8 ರವರ ಮುಂದೆ ಹಾಜರುಪಡಿಸಿದ್ದೇನೆ. ಅದೇ ದಿನ ಚಾ.ಸಾ-8 ರವರು ಆರೋಪಿಯನ್ನು ಹೆಚ್ಚಿನ ತನಿಖೆಗೆ ಒಳಪಡಿಸಿ ಠಾಣೆಯಲ್ಲಿ ಪಂಚರ ಸಮಕ್ಷಮ ಜಪ್ತಿ ಪಂಚನಾಮೆಯನ್ನು ಸಂಜೆ 6-15 ರಿಂದ 8-15 ರ ಮಧ್ಯದಲ್ಲಿ ಜರುಗಿಸಿದ್ದಾರೆ. ಪಂಚನಾಮೆಗೆ ನಾನು ಕೂಡ ಸಹಿ ಹಾಕಿರುತ್ತೇನೆ. ಸದರಿ ಪಂಚನಾಮೆಯ ಸಮಯದಲ್ಲಿ ಆರೋಪಿಯ ಕಡೆಯಿಂದ ಒಂದು ಮೊಬೈಲು, 28 ಬಂಗಾರದ ವಡವೆಗಳು ,19 ಬೆಳ್ಳಿಯ ಸಾಮಾನುಗಳು, ಎರಡು ಕಬ್ಬಿಣದ ರಾಡು, ಎರಡು ನಂಬರ್ ಪ್ಲೇಟುಗಳು ಮತ್ತು ಒಂದು ಕಾರನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಧೃಡೀಕೃತ ವರದಿಯನ್ನು ನಿ.ಪಿ-24 ಎಂದು ಗುರುತಿಸಲಾಯಿತು. ಸಾಕ್ಷಿಯು ಅದರ ಮೇಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅಮಾನತ್ತು ಪಂಚನಾಮೆಯ ನಕಲನ್ನು ನಿ.ಪಿ-25 ಎಂದು ಗುರುತಿಸಲಾಯಿತು. ಆರೋಪಿಯಿಂದ ವಶಪಡಿಸಿಕೊಳ್ಳಲಾದ ವಸ್ತುಗಳನ್ನು ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದ ಕಾರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ವಿ.ಸಿ ಮೂಲಕ ತೋರಿಸಿದಾಗ ಸಾಕ್ಷಿಯು ಗುರುತಿಸುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ನಾನು ಮೇಲೆ ಹೇಳಿದಂತೆ ನನ್ನ ತಂಡದೊಂದಿಗೆ ನಾನು ಯಾವುದೇ ಪತ್ತೆ ಕಾರ್ಯಕ್ಕೆ ಹೋಗಿಲ್ಲ ಆರೋಪಿಯು ಕಾರನ್ನು ಚಾಲನೆ ಮಾಡಿಕೊಂಡು ಬಂದಿಲ್ಲ, ಆತನ ಕಾರಿನಲ್ಲಿ ಯಾವುದೇ ವಸ್ತುಗಳು ಮತ್ತು ವಡವೆ ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ತಪ್ಪು ಸಂಖ್ಯೆ ಇರುವ ನಂಬರ್ ಪ್ಲೇಟುಗಳು ಸಿಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ ನನ್ನ ಮುಂದೆ ಯಾವುದೇ ಪಂಚನಾಮೆಯನ್ನು ಚಾ.ಸಾ-8 ಜರುಗಿಸಿಲ್ಲ ಮತ್ತು ಯಾವುದಲೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿ.ಪಿ-24 ಮತ್ತು 25 ಗಳನ್ನು ಬೇರೆ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ,

ಮರುವಿಚಾರಣೆ : ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.